ಆಹಾರ ಹಾಗೂ ನಾಗರೀಕ ಪೂರೈಕೆ ವ್ಯವಸ್ಥೆಯಲ್ಲಿ ಸುಧಾರಣೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 64 ; (244)
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್. ಮಂಡನ್ (ಕಾಪು)
ಉತ್ತರಿಸುವ ಸಚಿವರು ; ಶ್ರೀ ಹೆಚ್. ಹಾಲಪ್ಪ
(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಆಹಾರ ಹಾಗೂ ನಾಗರೀಕ ಪೂರೈಕೆ ವ್ಯವಸ್ಥೆಯಲ್ಲಿ ಅನಿಲ ಆಧಾರಿತ ಒಲೆ ಬಳಸುವವರಿಗೆ ದಿನ ಬಳಕೆಗೆ ಕನಿಷ್ಟ 3 ಲೀಟರ್ ಸೀಮೆಎಣ್ಣೆ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ.

ಉತ್ತರ

ಇಲ್ಲ

ಕ್ರ.ಸಂ. ಪ್ರಶ್ನೆ

ಆ) ಹಾಗಿದ್ದಲ್ಲಿ. ಎಂದಿನಿಂದ ಪ್ರಾರಂಭಿಸಲಾಗುವುದು.

ಉತ್ತರ

ಉದ್ಭವಿಸುವುದಿಲ್ಲ.

ಕ್ರ.ಸಂ. ಪ್ರಶ್ನೆ

ಇ) ಹೊಸ ಪಡಿತರ ಚೀಟಿ ಎಂದಿನಿಂದ ಲಭ್ಯವಾಗುವುದು.

ಉತ್ತರ

ಹೊಸ ಪಡಿತರ ಚೀಟಿಯನ್ನು ನೀಡುವ ಕಾರ್ಯ ನಿರಂತರವಾಗಿರುತ್ತದೆ.

ಕ್ರ.ಸಂ. ಪ್ರಶ್ನೆ

ಈ) ಪಡಿತರ ಚೀಟಿಯಲ್ಲಿ ಬಿ.ಪಿ.ಎಲ್. ಹಾಗೂ ಎ.ಪಿ.ಎಲ್. ಎರಡೇ ವಿಭಾಗ ಮಾಡಿದ್ದಲ್ಲಿ ಗೊಂದಲ ಉಂಟಾಗುವುದಿಲ್ಲವೆ?

ಉತ್ತರ

ಇಲ್ಲ

ಕ್ರ.ಸಂ. ಪ್ರಶ್ನೆ

ಉ) ಇದನ್ನು ತಡೆಗಟ್ಟಲು ಸರ್ಕಾರದ ಕ್ರಮವೇನು?

ಉತ್ತರ

ಉದ್ಭವಿಸುವುದಿಲ್ಲ.

ಶ್ರೀ ಲಾಲಾಜಿ ಆರ್. ಮೆಂಡನ್ : ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಸಾರ್ವಜನಿಕರ ಪರವಾಗಿ ನಾನು ಕೇಳುವುದೇನೆಂದರೆ. ದಿನಬಳಕೆಗೆ ಅನಿಲ ಆಧಾರಿತ ಒಲೆ ಬಳಸುವವರಿಗೂ ಕೂಡ ಕನಿಷ್ಟ ಮೂರು ಲೀಟರ್ ಸೀಮೆಎಣ್ಣೆ ಕೊಡುವ ಬಗ್ಗೆ ಕೇಳಿದ್ದೇನೆ. ಅದನ್ನು ಆದ್ಯತೆಯ ಮೇರೆಗೆ ಪರಿಶೀಲಿಸಬೇಕು. ಮತ್ತು ಅದೇ ರೀತಿಯಲ್ಲಿ ಬಿಪಿಎಲ್ ಮತ್ತು ಎಪಿಎಲ್ ಪಟ್ಟಿಯಲ್ಲಿ ಗೊಂದಲವಿದೆ. ಹೊಸ ಪಡಿತರ ಚೀಟಿಯಲ್ಲೂ ಕೂಡ ತಾತ್ಕಾಲಿಕ ಪಡಿತರ ಚೀಟಿ ಕೊಡುತ್ತಿದ್ದಾರೆ. ಅದಕ್ಕೆ ಸಾಮೂಹಿಕವಾಗಿ ಹೊಸ ಪಡಿತರ ಚೀಟಿ ವಿತರಣೆ ಮಾಡಬೇಕೆಂದು ಮಾನ್ಯ ಆಹಾರ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಮತ್ತು ಅನಿಲ ಆಧಾರಿತ ಒಲೆ ಬಳಸುವವರಿಗೆ ಸೀಮೆಎಣ್ಣೆ ಕೊಡುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗಿ ಕೋರುತ್ತೇನೆ.

ಶ್ರೀ ಗೋಪಾಲ ಭಂಡಾರಿ ; ಅನಿಲ ಆದಾರಿತ ಒಲೆ ಬಳಸುವವರಿಗೆ ದಿನ ಬಳಕೆಗೆ ಮೂರು ಲೀಟರ್ ಸೀಮೆಎಣ್ಣೆ ಕೊಡುತ್ತೀರಾ ಎಂದು ಕೇಳಿದಾಗ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ. ತಾವು ಫೋಟೋ ತೆಗೆಸುವ ಕೆಲಸ ಮಾಡಿಸುತ್ತಿದ್ದೇವೆಂದು ಹೇಳಿದರು. ನನ್ನ ಮತಕ್ಷೇತ್ರದ ಕಾರ್ಕಳ ತಾಲ್ಲೂಕಿನಲ್ಲಿ ಫೋಟೋ ತೆಗೆಸುವ ಕೆಲಸವನ್ನು ಮಾಡಿ ಕಾರ್ಡುಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಶೇಕಡ 50ರಷ್ಟು ದೋಷವಿದೆ. ಅದರಲ್ಲಿ ಅನಿಲ ಇಲ್ಲದಿದ್ದವರಿಗೆ ಕಾರ್ಡಿನ ಮೇಲುಗಡೆ ಅನಿಲ ಇದೆ ಎಂದು ಮತ್ತು ಸಿಲಿಂಡರ್ 0 ಎಂದು ಕೆಳಗಡೆ ಇದೆ. ಸಿಲಿಂಡರ್ ಇಲ್ಲದೇ ಅನಿಲ ವಿತರಣೆ ಹೇಗೆ ಆಗುತ್ತದೆ ಎನ್ನುವ ಪ್ರಶ್ನೆ. ಇವರು ಕೊಟ್ಟಿರುವ ಕಾರ್ಡುಗಳಲ್ಲಿ ಸುಮಾರು ಶೇಕಡ 50 ರಷ್ಟು ದೋಷದಿಂದ ಕೂಡಿದೆ. ಹೀಗಾಗಿ ಕ್ಷೇತ್ರದಲ್ಲಿ ನಾವು ಶಾಸಕರು ಸಂಚಾರ ಮಾಡದಂಥ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಮಾನ್ಯ ಆಹಾರ ಮಂತ್ರಿಗಳು ಏನಾದರೂ ಪರಿಹಾರವನ್ನು ಸೂಚಿಸಬೇಕು.

ಶ್ರೀ ಆರ್. ಧ್ರುವನಾರಾಯಣ : ಹೊಸ ಪಡಿತರ ಚೀಟಿ ಎಂದಿನಿಂದ ಲಭ್ಯವಾಗುವುದು ಎನ್ನುವ ಪ್ರಶ್ನೆಗೆ ಹೊಸ ಪಡಿತರ ಚೀಟಿ ನೀಡುವ ಕಾರ್ಯ ನಿರಂತರವಾಗಿರುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಎಲ್ಲಾ ಕಡೆ ಬಿಪಿಎಲ್ ಕಾರ್ಡುಗಳ ಬಗ್ಗೆ ಸಾಕಷ್ಟು ಸಮಸ್ಯೆಗಳಿರುವುದು ತಮ್ಮ ಗಮನಕ್ಕೆ ಬಂದಿದೆ. ಇದನ್ನು ತಾವು ನಿರಂತರವೆಂದು ಹೇಳಿದರೆ ಹೇಗೆ? ಈಗಾಗಲೇ ಒಂದು ವರ್ಷದಿಂದ ಸಮಸ್ಯೆ ಇದೆ. ಇದಕ್ಕೆ ಇನ್ನೂ ಪರಿಹಾರ ಹೀಗೆ ನಿರಂತರವಾಗಿರಲಿ ಎಂದು ಹೇಳುತ್ತೀರಾ? ತಾವು ಯಾವಾಗ ಇದಕ್ಕೆ ಕೊನೆಯ ಅಂತ್ಯ ಹಾಡುತ್ತೀರಾ? ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಹೆಚ್.ಹಾಲಪ್ಪ : ನಮ್ಮ ಸದಸ್ಯರಾದ ಲಾಲಾಜಿ ಆರ್.ಮೆಂಡನ್‌ರವರು ಹೇಳಿದ ಹಾಗೆ. ಸೀಮೆಎಣ್ಣೆಯದು ಸ್ವಲ್ಪ ತೊಂದರೆಯಿದೆ ಎಂದು ಹೇಳಿದ್ದಾರೆ. ಅವರು ಹೇಳಿದ್ದು ಮಲೆನಾಡಿನ ಎಲ್ಲಾ ಶಾಸಕರ ಅಭಿಪ್ರಾಯ. ಕಳೆದ ಸಾರಿಯೂ ಇದಕ್ಕೆ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿತ್ತು. ಸೀಮೆಎಣ್ಣೆಯನ್ನು ನಾವು ಉರುವಲು ಆಗಿ ಉಪಯೋಗಿಸುವುದಿಲ್ಲ. ಅದನ್ನು ಬೆಳಕಿಗಾಗಿ ಉಪಯೋಗಿಸುತ್ತೇವೆ. ಅದಕ್ಕಾಗಿ ಬೇಕೆಂದು ಕೇಳಿದ್ದಾರೆ. ಇದು ಅವರ ಅಭಿಪ್ರಾಯ. ನಾವು ಅದನ್ನು ಪರಿಶೀಲಿಸುತ್ತೇವೆ. ಮತ್ತೊಂದು ಕಾರ್ಡುಗಳಲ್ಲಿ ಆಗಿರುವ ದೋಷಗಳನ್ನು ಸರಿಪಡಿಸುತ್ತೇವೆ. ನಿರಂತರವಾಗಿ ಕೊಡುತ್ತೇವೆಂದು ಹೇಳಿದರೆ ಯಾವಾಗಲೂ ನಡೆಯುವ ಕಾರ್ಯಕ್ರಮ. ದೋಷ ಇರುವುದನ್ನು ಸರಿಪಡಿಸುತ್ತೇವೆ.

ಶ್ರೀ ಆರ್. ಧ್ರುವನಾರಾಯಣ: ಯೂನಿಟ್ ಸಿಸ್ಟ್ಂನ್ನು ಹಳ್ಳಿಗಳಲ್ಲಿ ಮಾಡಿ ಎಂದು ಹೇಳಿದ್ದೀರಿ. ಈಗ ಏನಾಗಿದೆ ಎಂದರೆ. ನ್ಯಾಯಬೆಲೆ ಅಂಗಡಿಯವರು. ಯಾರಿಗೆ ಸಿಕ್ಕಿಲ್ಲ. ಸಾಮಾಜಿಕ ನ್ಯಾಯವೆಂದು ಹಂಚುತ್ತಿದ್ದಾರೆ. ತಾವು ಯೂನಿಟ್ ಸಿಸ್ಟ್ಂನ್ನು ಹಂಚಿದರೆ ನಿಜವಾಗಲೂ ಬಹಳ ಸಮಸ್ಯೆಯಾಗುತ್ತದೆ. ನೀವು ಪೂರ್ಣವಿರಾಮ ಹಾಕುವವರೆವಿಗೂ ಅಂದರೆ ನೀವು ಬಿಪಿಎಲ್ ಕಾರ್ಡು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೊಟ್ಟಾದ ಮೇಲೆ ಯೂನಿಟ್ ಸಿಸ್ಟ್ಂ ಮಾಡಿದರೆ ನಿಜವಾಗಲೂ ಯಾವುದೇ ತೊಂದರೆಯಿರುವುದಿಲ್ಲ. ನೀವು ಈಗಲೇ ಯೂನಿಟ್ ಸಿಸ್ಟ್ಂ ಮಾಡಿದರೆ ಊರುಗಳಲ್ಲಿ ಶಾಸಕರ್ಯಾರು ಹೋಗುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ಇದಕ್ಕೆ ಅಂತಿಮ ತೆರೆ ಎಳೆಯಬೇಕು.

ಶ್ರೀ ಹೆಚ್.ಹಾಲಪ್ಪ : ಮಾನ್ಯ ಅಧ್ಯಕ್ಷರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈಗ ಫೋಟೋಗ್ರಫಿ ಕೆಲಸ ನಡೆಯುತ್ತಿದೆ. ಇದು ಆದನಂತರ ಈಗಿರತಕ್ಕಂಥ ತಾರತಮ್ಯ ಸರಿಯಾಗುತ್ತದೆ. ಇದರಲ್ಲಿರತಕ್ಕಂಥ ತಾರತಮ್ಯವನ್ನು 5 ವರ್ಷದಿಂದ ಸರಿಪಡಿಸುತ್ತಲೇ ಇದ್ದೀರೆಂದು ಮಾನ್ಯ ಸದಸ್ಯರು ಹೇಳಿದರು. ಆದರೆ. ನಾವು ಬಂದು 3 ತಿಂಗಳು ಮಾತ್ರವಾಗಿದೆ. ಖಂಡಿತ ನಾವು ಸರಿಪಡಿಸುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆಗೆ ಚರ್ಚೆ ಸಾಕು. ಇನ್ನು ಎರಡು ಪ್ರಶ್ನೆಗಳಿವೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಮಾನ್ಯ ಅಧ್ಯಕ್ಷರೆ. ರೇಷನ್ ಕಾರ್ಡ್ ವಿತರಣೆಯಲ್ಲಿ ಬಹಳಷ್ಟು ಗೊಂದಲ ಇದೆ. ಮಾನ್ಯ ಮುಖ್ಯಮಂತ್ರಿಗಳು

ಇಲ್ಲಿರುವುದರಿಂದ ಇದರ ಬಗ್ಗೆ ಏನಾದರೊಂದು ಪರಿಹಾರವನ್ನು ಹೇಳಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಇದರ ಬಗ್ಗೆ ಸರ್ವೆ ಆಗಬೇಕು ಪುನರ್ ಸರ್ವೇ ಮಾಡುವುದಿಲ್ಲವೆಂದು ಅವರು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಬಿ.ಸಿ.ಪಾಟೀಲ್‌ರವರೆ. ಬಜೆಟ್ ಮೇಲೆ ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಕೂಡ ಬಿ.ಪಿ.ಎಲ್. ಕಾರ್ಡ್ ಮೇಲೆ ಮಾತನಾಡಿ. ಈ ಪ್ರಶ್ನೆಯಲ್ಲಿ ಯೂನಿಟ್ ಸಿಸ್ಟಮ್ ಬಗ್ಗೆ ಇರುವುದಿಲ್ಲ. ಆದ್ದರಿಂದ. ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ :– ಇದರ ಬಗ್ಗೆ ಮಾತನಾಡುವುದಕ್ಕೆ ಪ್ರತ್ಯೇಕವಾಗಿ ಮಾತನಾಡುವುದಕ್ಕೆ ಎರಡು ಗಂಟೆ ಅವಧಿಯನ್ನು ತಾವು ಕೊಡಬೇಕಾಗುತ್ತದೆ.

ಅಧ್ಯಕ್ಷರು :– ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಚರ್ಚೆಗೆ ಪ್ರತ್ಯೇಕ ಅವಕಾಶ ಮಾಡಿಕೊಡುತ್ತೇನೆ. ನಿಮ್ಮ ಭಾವನೆಗಳಿಗೆ ನಾನು ಸ್ಪಂದನೆ ಮಾಡಿದ್ದೇನೆ. ಇದು ಬಹಳ ಮಹತ್ವದ ಪ್ರಶ್ನೆಯಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡಲು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :– ಈ ಸದನ ಮುಗಿಯುವುದರೊಳಗೆ ಅವಕಾಶ ಕೊಡಬೇಕು.

ಅಧ್ಯಕ್ಷರು ;– ಈ ಸದನ ಮುಗಿಯುವುದರೊಳಗೆ ಅವಕಾಶ ಕೊಡುತ್ತೇನೆ. ಮುಗಿದ ನಂತರ ಹೇಗೆ ಕೊಡುವುದಕ್ಕೆ ಆಗುತ್ತದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ಪ್ರಶ್ನೆಗಳಿಗೆ ಅಧಿಕಾರಿಗಳು ಸರಿಯಾದ ಉತ್ತರವನ್ನು ಮಾನ್ಯ ಸಚಿವರಿಗೆ ಒದಗಿಸಿ ಕೊಡದಿದ್ದಾಗ ತಾವು ಮತ್ತೊಂದು ಸಾರಿ ಇಂಥ ವಿಷಯಗಳ ಮೇಲೆ ಚರ್ಚೆ ಮಾಡಲು ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು :– ಅವಕಾಶ ಕೊಡುತ್ತೇನೆ.